# ಹಳದಿ

ಸೂರ್ಯನಿಗೆ ಸೆಡ್ಡು ಹೊಡೆಯುವ
ಸೂರ್ಯಕಾಂತಿಯ ಸೊಕ್ಕು

ಮರದ ಪೊಟರೆಯ ತುಂಬ
ಚೀರಿಡುವ ಮರಿಗಳ ಕೊಕ್ಕು

ನಿಂಬೆ, ಅನಾನಸ್ ಜ್ಯೂಸು
ಹೆದ್ದಾರಿಯಲ್ಲಿ ಬಿದ್ದ ಹಣ್ಣೆಲೆ

ಆಸ್ಪತ್ರೆಯ ಬಿಳಿ ಹಾಸಿನಲ್ಲಿ
ಇಷ್ಟಗಲ ಹರಡಿಕೊಂಡ ಕಲೆ

ಬೀದಿಗೆ ಬೀದಿಯೇ ಬೆವರಿ
ಕೀವು ಸುರಿಸುವ ವ್ರಣ

ಮನೆಯಲ್ಲಿ ಝುಳಕ್ಕೆ ಸೋತು
ಆಸ್ಫೋಟಿಸುವ ನೊಣ

ಒಂದೇ ದೇಶದ ಸಂಜೆ ಮುಗಿಲು
ನೋವು ನರಳಿಕೆಯ ರಂಗು

ಒಂದೇ ನುಡಿಯ ಏಕತಾರಿ
ಕಾಮಾಲೆ ರಾಗದ ಗುಂಗು

